ಆಳದ ಎಂದೆನಲ್ಲವೆ? ಅದು ಅಂತಿಂಥ ಆಳವಲ್ಲ. ತಳವೇ ಕಾಣದ ಬಾವಿ. ಎಷ್ಟೊಂದು ಸೂಕ್ಷ್ಮವಾಗಿ, ತಂತಿಯ ಮೇಲಿನ ನಡಿಗೆಯ ಹಾಗೆ ನನ್ನ ಬದುಕು ಕಟ್ಟಿಕೊಂಡಿದ್ದೆ. ಎಷ್ಟು ಹಣ, ಖ್ಯಾತಿ, ಎಲ್ಲ ಇದ್ದರೂ ಏಕೋ ಅಭದ್ರತೆ ಕಾಡಿತು. ತುಂಬ ಹಣ ಮಾಡಬೇಕು, ನನ್ನ ವಿಶ್ರಾಂತ ಜೀವನ ಇಂದಿನ ತಾರಾ ಜೀವನಕ್ಕಿಂತ ಯಾವುದೇ ರೀತಿಯಲ್ಲೂ ಕಡಿಮೆ ಇರಬಾರದು. ಜೊತೆಗೆ ನನ್ನದೇ ಒಂದು ಸುಖ ಸಂಸಾರ. ನನ್ನದೇ ಒಂದು ಮಗು.

ಇದ್ದಕ್ಕಿದ್ದ ಹಾಗೆ ಅವನು ನನ್ನ ಜೀವನವನ್ನು ಪ್ರವೇಶಿಸಿದ. ಅವನು ಆಗ ತಾನೇ ಚಿತ್ರ ಜೀವನದಲ್ಲಿ ಮೇಲೇರುತ್ತಿದ್ದ ಯುವ ನಟ. ತನಗಿಂತ ಆರು ವರ್ಷ ಚಿಕ್ಕವನು. ಆದರೆ ವಯಸ್ಸು ತಮ್ಮ ಸಂಬಂಧಕ್ಕೆ ಅಡ್ಡಿಯಾಗಲಿಲ್ಲ. ಅವನ ಎರಡು ಚಿತ್ರಗಳು ಭರ್ಜರಿಯಾಗಿ ಯಶಸ್ವಿಯಾಗಿದ್ದವು. ಮೂರನೆಯ ಚಿತ್ರವೂ ಯಶಸ್ವಿಯಾದರೆ ಹ್ಯಾಟ್ರಿಕ್. ನಾವು ನಮ್ಮ ಸಂಬಂಧ ಮಾಧ್ಯಮದವರ ಬಾಯಿಗೆ ಬೀಳದಂತೆ ಎಚ್ಚರ ವಹಿಸಿದೆವು.

ಯಾವುದೋ ದುರ್ಬಲ ಗಳಿಗೆಯಲ್ಲಿ, ಅವನೊಡನೆ ಸೇರಿ ಚಿತ್ರವೊಂದನ್ನು ನಿರ್ಮಿಸಿ ತುಂಬಾ ಹಣ, ಖ್ಯಾತಿ ಸಂಪಾದಿಸಬೇಕೆಂಬ ಹುಕ್ಕಿ ಹುಟ್ಟಿ ಬಿಟ್ಟಿತು. ಕೇವಲ ನಾಲ್ಕಾರು ವರ್ಷಗಳಲ್ಲಿ ತಾನು ತೆತ್ತ ಬೆಲೆಯಾದರೂ ಎಷ್ಟು!

'ಧೈರ್ಯವಾಗಿ ಸಹಿ ಹಾಕು ಹನಿ, ಈ ಚಿತ್ರಕ್ಕೆ ಒಂದು ಕೋಟಿ ಸುರೀತಿದ್ದಾನೆ ಅವನು. ಅದಕ್ಕೆ ಭದ್ರತೆ ಇದು. ನಿನ್ನ ಹೆಸರೇ ಒಂದು ಭದ್ರತೆ. ಆದರೆ, ವ್ಯಾವಹಾರಿಕವಾಗಿ ನಿನ್ನ ಮನೆಯ ಶ್ಯೂರಿಟಿ ಬೇಕು. ಜೊತೆಗೆ ಐವತ್ತು ಲಕ್ಷ ನಿನ್ನ ಪಾಲೂ ಕೂಡ.'

ಎಂಥ ಪೆದ್ದಿ ನಾನು! ಯಾಕೆ ನಾನು ವಿಫಲತೆಯ ಬಗ್ಗೆ ಯೋಚಿಸಲಿಲ್ಲ? ಈ ಚಿತ್ರ ಗೆದ್ದರೆ, ಇನ್ನೊಂದು ಮನೆ ಕೊಳ್ಳಬಹುದು. ನನ್ನ ಬಂಡವಾಳದ ಎರಡರಷ್ಟು ಹಣ ವಾಪಸ್ ಬರಬಹುದು.

ಅವನು ಹೇಳಿದ್ದ: 'ಹನಿ, ಇನ್ನೆಷ್ಟು ದಿನ ಈ ಕಣ್ಣಾಮುಚ್ಚಾಲೆ? ನನ್ನ ಈ ಹ್ಯಾಟ್ರಿಕ್ ಸಿನಿಮಾದ ಬೆಳ್ಳಿಹಬ್ಬದಲ್ಲಿ ಎಲ್ಲರೆದುರಿಗೆ ನಮ್ಮ ಮದುವೆಯ ನಿರ್ಧಾರ ಪ್ರಕಟಿಸಿ ಬಿಡೋಣ.'

ಸುಖದ ದಿನಗಳು, ಅಮಲಿನ ಕಲ್ಪನೆಗಳು. ಅವನು ಹೇಳಿದ ಹಾಗೆ ಚಿತ್ರ ಯಶಸ್ವಿಯಾಯಿತೇನೋ ನಿಜ, ಆದರೆ ಬೆಳ್ಳಿಹಬ್ಬ ಆಚರಿಸುವಷ್ಟು ಅಲ್ಲ.

'ಹೇಗೋ, ಸ್ವಲ್ಪಾನಾದರೂ ಲಾಭ ಬಂದಿರಬೇಕಲ್ಲ, ನನ್ನ ಮನೆ ಶ್ಯೂರಿಟಿ ರದ್ದು ಮಾಡಿಸಿಕೊಡು. ಅಂದ ಹಾಗೆ ನನ್ನ ಐವತ್ತು ಲಕ್ಷಕ್ಕೆ ಐವತ್ತು ಲಕ್ಷ ಲಾಭ ಸೇರಿಸಿ ಯಾವಾಗ ಹಿಂದಕ್ಕೆ ಕೊಡ್ತೀಯಾ?'

ನಾನು ಕೇಳಿದಾಗಲೆಲ್ಲ ಏನೋ ಒಂದು ಸಬೂಬು ಹೇಳುತ್ತಿದ್ದ. 'ಅದೇ ನಿರ್ಮಾಪಕ ಇನ್ನೊಂದು ಸಿನಿಮಾ ಮಾಡ್ತಿದ್ದಾನಂತೆ. ಸ್ವಲ್ಪ ದಿನ ತಾಳು, ನಿನ್ನ ಮನೆ, ದುಡ್ಡು ಎಲ್ಲ ವಾಪಸ್ ಬರುತ್ತೆ.'

ಮನೆ, ಹಣ ವಾಪಸ್ ಬರುವುದಿರಲಿ, ಅವನು ಬರುವುದೇ ಕಡಿಮೆಯಾಯ್ತು. ಚಿತ್ರ ಜಗತ್ತಿನ ಗಾಸಿಪ್‌ಗಳಲ್ಲಿ ಇವನ ಹೆಸರು ಯಾರೋ ಹೊಸ ನಟಿಯ ಜೊತೆ ಕೇಳಿ ಬಂತು.

ಒಮ್ಮೆ ಅವನು ಬಂದಾಗ, 'ನಮ್ಮ ಮದುವೆ ಸುದ್ದಿ ಯಾವಾಗ ಕೊಡೋಣ?' ಎಂದೆ. ನಕ್ಕ, ನೋಡೋಣ ಅಂತ ಮಾತು ತೇಲಿಸಿದ. ಈಗ ಅವನು ಓಡುವ ಕುದುರೆಯಂತೆ. ಮದುವೆ ಸುದ್ದಿ ಹರಡಿದರೆ ಅವನ ಮಾರುಕಟ್ಟೆಯೇ ಕುಸಿದು ಬಿಡುತ್ತಂತೆ. ಯಾಕೋ ಇವನನ್ನು ನಂಬಿ ತಪ್ಪು ಮಾಡಿದೆ ಅನ್ನಿಸಿತು. ಹುಚ್ಚು ಹುರುಪಿನಲ್ಲಿ ಸದ್ಯ ಮಗು ಮಾಡಿಕೊಳ್ಳಲಿಲ್ಲವಲ್ಲ.